ಪೇಟೆ, ಅರಳೇಪೇಟೆ, ಸಿಟಿ ಮಾರ್ಕೆಟ್ ಸುತ್ತಲಿನ ಬಡವರು, ಕೆಳಮಧ್ಯಮ ವರ್ಗದ ಜನರೇ ಹೆಚ್ಚಾಗಿರುವ ಪ್ರದೇಶಗಳ ಬದುಕು – ನನ್ನ ಕಥೆಗಳ ವಸ್ತುಗಳಾದವು. ನಿಮಗೊಂದು ಘಟನೆ ಹೇಳಬೇಕು. ನಾನು ಸ್ಕೂಲಿಗೆ ಹೋಗುತ್ತಿದ್ದ ಹಾದಿಯಲ್ಲಿ ತರಗು ಪೇಟೆಯಲ್ಲಿ ಒಬ್ಬ ತಮಿಳು ಮಹಿಳೆ ಬೋಂಡ ಹಾಕಿ ಮಾರುತ್ತಿದ್ದಳು. ನಾನು ಶಾಲೆಗೆ ಹೋಗುವಾಗ ಬರುವಾಗ ಆಕೆಯ ಅಂಗಡಿಯ ಮುಂದೆ ನಿಂತು ಬೋಂಡ ಹಾಕುತ್ತಿದ್ದ ಆ ಹೆಂಗಸನ್ನೂ ಗರಿಗರಿಯಾದ ಬೋಂಡಗಳನ್ನೂ ನೋಡುತ್ತಾ ತುಸು ಹೊತ್ತು ನಿಂತಿರುತ್ತಿದ್ದೆ. ಆಕೆಯ ಹೆಸರು ಮುನಿಯಮ್ಮ. ಒಮ್ಮೊಮ್ಮೆ ಮುನಿಯಮ್ಮ ನನ್ನನ್ನು ಕರೆದು ಬೋಂಡವನ್ನೋ, ಬೋಂಡ ಪುಡಿಯನ್ನೋ ತಿನ್ನಲು ಕೊಡುತ್ತಿದ್ದಳು. ಒಮ್ಮೆ ಇದ್ದಕ್ಕಿದ್ದಂತೆ ಆ ಹೆಂಗಸು ಅಲ್ಲಿಂದ ಕಣ್ಮರೆಯಾಗಿಬಿಟ್ಟಳು. ಆ ಹೆಂಗಸಿಗೆ ಏನಾಯ್ತು ಎಂದು ವಿಚಾರಿಸಿದಾಗ ಅಲ್ಲಿ ನಡೆದಿದ್ದು ಗೊತ್ತಾಯಿತು. ಆಕೆಗೊಬ್ಬ ಸುಂದರಿಯಾದ ಮಗಳಿದ್ದಳು. ಆಕೆ ಕೂರುತ್ತಿದ್ದ ಜಾಗದ ಹತ್ತಿರದ ಅಂಗಡಿಯ ಮಾಲೀಕನಾದ ಶೆಟ್ಟಿಯ ಮಗ ಆಕೆಯ ಮಗಳನ್ನು ಬಸಿರು ಮಾಡಿದ್ದ. ಅದು ಶೆಟ್ಟಿಗೆ ಗೊತ್ತಾಯಿತು. ಮುಂದೇನು ಎಂದು ಹೆದರಿದ ಆತ ಬೋಂಡ ಮಾರುವವಳನ್ನು ಅಲ್ಲಿಂದ ಜಾಗ ಖಾಲಿ ಮಾಡಿಸಿದ್ದ. ಇದನ್ನೇ ಆಧಾರವಾಗಿಸಿಕೊಂಡು ನಾನು 'ಹಳೇ ಸಿಟಿ ಮಾರ್ಕೆಟ್ ರೋಡ್' ಎಂಬ ಕಥೆ ಬರೆದಿದ್ದೆ. ಹಳ್ಳಿಯ ಅನುಭವದ ಜೊತೆಗೆ ನಗರದ ಇಂಥ ಅನುಭವಗಳನ್ನೂ ಕೂಡ ನಾನು ಕಥೆಗಳನ್ನಾಗಿಸತೊಡಗಿದೆ.

◆ **ಪಿ. ಲಂಕೇಶರು ಒಂದು ಕಡೆ ದಾಖಲಿಸಿದಂತೆ ನಿಮ್ಮ ಕೆಲವು ಕಥೆಗಳು ಕನ್ನಡದ ಶ್ರೇಷ್ಠ ಕಥೆಗಳ ಸಾಲಿಗೆ ಸೇರುತ್ತವೆ. ದಲಿತ ಸಂವೇದನೆಯೂ ಸೇರಿದಂತೆ ಗ್ರಾಮೀಣ ಶೂದ್ರ ಜಗತ್ತನ್ನು ಅನಾವರಣಗೊಳಿಸಿದ ಕನ್ನಡದ ಮುಖ್ಯ ಕಥೆಗಾರರಲ್ಲಿ ನೀವೂ ಒಬ್ಬರು. ಆರಂಭ ಕಾಲದಲ್ಲಿ**

